## ಅರ್ಥ್ ವ್ಯೂವರ್

ಐಪ್ಯಾಡ್ ನ ಈ ಆ್ಯಪ್ ಭೂಮಿಯ ಇತಿಹಾಸ ಕುರಿತ ಮಾಹಿತಿ ತಿಳಿಸುತ್ತದೆ. ಭೂಮಿಯ 4.5 ಶತಕೋಟಿ ವರ್ಷಗಳ ಭೂಗರ್ಭ ಹಾಗೂ ಹವಾಮಾನದ ಇತಿಹಾಸವನ್ನು ಅರಿಯಲು ವಿದ್ಯಾರ್ಥಿಗಳಿಗೆ ಹಾಗೂ ವಿಜ್ಞಾನ ಶಿಕ್ಷಕರಿಗೆ ಅನುಕೂಲಕರ ಆ್ಯಪ್. ಇಡೀ ಭೂ ಮಂಡಲದಲ್ಲಿ ಖಂಡಗಳು ಬೇರೆಯಾಗುವುದನ್ನು ಅನಿಮೇಶನ್ ಚಿತ್ರಗಳ ಮೂಲಕ ವೀಕ್ಷಿಸಬಹುದು. ಹಾಗೆಯೇ ಬದಲಾದ ಭೂ ತಾಪಮಾನ, ಆಮ್ಲಜನಕ ಮತ್ತು ಇಂಗಾಲದ ಡೈ ಆಕ್ಸೈಡ್ ಮಟ್ಟವನ್ನೂ ತಿಳಿಸುತ್ತದೆ. ಇದು ಸಂಪೂರ್ಣ ಉಚಿತ.




## ಗೂಗ್ಲ್ ಟ್ರಾನ್ಸ್‌ಲೇಟ್

30ಕ್ಕಿಂತ ಅಧಿಕ ಭಾಷೆಗಳನ್ನು ಸಪೋರ್ಟ್ ಮಾಡುತ್ತದೆ. ಹೆಚ್ಚಿನ ಸಂದರ್ಭದಲ್ಲಿ ಕರಾರುವಾಕ್ಕು ಫಲಿತಾಂಶ ನೀಡುತ್ತದೆ. ಪ್ರವಾಸಿಗರಿಗೆ ಇದು ಅನುಕೂಲ. ಐಫೋನ್ ಆ್ಯಪ್ ಆಗಿದ್ದು, ಕೆಲವು ಅನಿರೀಕ್ಷಿತ ಸಂದರ್ಭಗಳಲ್ಲಿ ನಿಮ್ಮ ನೆರವಿಗೆ ನಿಲ್ಲುತ್ತದೆ.



## ಎವಿಜಿ ಫ್ಯಾಮಿಲಿ ಸೇಫ್ಟಿ

ಇದು ಐಒಎಸ್ ಆ್ಯಪ್ ಆಗಿದ್ದು, ಮಕ್ಕಳು ಅಶ್ಲೀಲವಾದ, ಬೇಡದ ವಿಷಯವನ್ನು ನೋಡದಂತೆ ಮರೆಮಾಚುತ್ತದೆ. ಪೋಷಕರಿಗೆ ಎರಡು ಬಗೆಯ ಆಯ್ಕೆಗಳಿರುತ್ತವೆ. ನಿಯಂತ್ರಿಸುವುದು ಮತ್ತು ಫಿಲ್ಟರ್ ಮಾಡುವುದು. ಸೆಟಪ್ ಮಾಡಲು ಬರದಿದ್ದರೆ ಪ್ರೀಸೆಟ್ ಬಳಸಬಹುದು. ಇದು ಕುಟುಂಬ ಸ್ನೇಹಿ ಆ್ಯಪ್ ಎಂದೇ ಪ್ರಚಲಿತ.

AVG. Family Safety

## ಹೆಲ್ತ್‌ಟ್ಯಾಪ್

ಹೆಲ್ತ್‌ಟ್ಯಾಪ್ ವೆಬ್‌ಸೈಟ್ ಆರಂಭಿಸಿರುವ ಈ ಆ್ಯಪ್ ನೆರವಿನಿಂದ ಅಮೆರಿಕದ ತಜ್ಞ ವೈದ್ಯರಿಗೆ ನೀವು ಪ್ರಶ್ನೆಗಳನ್ನು ಕೇಳಬಹುದು. ಇದು ಐಫೋನ್ ಆ್ಯಪ್. ಉಚಿತ. ಆದರೆ ಇಂತಹ ವೈದ್ಯರೇ ಬೇಕು ಎಂದು ಮನವಿ ಮಾಡಿದರೆ ಶುಲ್ಕ ವಿಧಿಸಲಾಗುತ್ತದೆ. ನಿಮ್ಮದೇ ಆರೋಗ್ಯ ಸಮಸ್ಯೆ ಇದ್ದ ಬೇರೆಯವರು ಕೇಳಿದ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳನ್ನು ಕೂಡಾ ನೋಡಬಹುದು.




■ ಎಸ್. ತುಂಬೆ